**<u>ಪಿ ಡಬ್ಲ್ಯೂ : 5 - ಅನೀಲ್ ಕುಮಾರ್</u>**

ಸಾಕ್ಷಿಗೆ ದಿನಾಂಕಃ **04.10.2023** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ: ಎಪಿಪಿರವರಿಂದ:</u>**

ಆ ದಿನ ನಕಲಿ ಪಾಸ್‌ನ್ನು ಬಳಸುತ್ತಿದ್ದ ವ್ಯಕ್ತಿ ಈ ಪ್ರಕರಣದಲ್ಲಿ ಈ ದಿನ ಹಾಜರಿರುವ ಆರೋಪಿಯೇ ಆಗಿರುತ್ತಾರೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್.ವಿ.ಎಸ್. ವಕೀಲರಿಂದ :</u>**

ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: **10.04.2013** ರಂದು ಆರೋಪಿ ಬಸ್‌ನಲ್ಲಿ ನಕಲಿ ಪಾಸ್ ಉಪಯೋಗಿಸಿ, ಪ್ರಯಾಣಿಸುತ್ತಿದ್ದುದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಳಕವಾಡಿ ಹೊಸಹಳ್ಳಿ ಕ್ರಾಸ್ ಬಳಿ ಬಸ್‌ನ್ನು ತನಿಖಾಧಿಕಾರಿಗಳು ಪರಿಶೀಲಿಸಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಸಮಯ ಮಧ್ಯಾಹ್ನ **2-30** ಆಗಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಗೆ ಸೇರಿದ ಬೇರೊಬ್ಬರ ಪಾಸ್‌ನ್ನು ಬಳಸುತ್ತಿದ್ದುದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ಆ ದಿನ ಯಾವ ವಾಹನದಲ್ಲಿ ಬಂದಿದ್ದರು ಎಂದು ನನಗೆ ಗೊತ್ತಿಲ್ಲ.

**2.** ತನಿಖಾಧಿಕಾರಿಗಳು ಬಸ್‌ನ್ನು ಪ್ರವೇಶಿಸದ ಸಂದರ್ಭ ನಿರ್ವಾಹಕರಿಂದ ಎಷ್ಟು ಜನ ಪ್ರಯಾಣಿಸುತ್ತಿದ್ದರು ಎಂದು ಮಾಹಿತಿ ಪಡೆದಿಲ್ಲ ನಾನು ಚಾಲಕರ ಸೀಟ್‌ನಲ್ಲಿ ಇದ್ದೆ. ಆ ದಿನ ತನಿಖಾಧಿಕಾರಿಗಳು ಬಸ್‌ನಲ್ಲಿ ಫೋಟೋ ತೆಗೆದ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಇಬ್ಬರು ತನಿಖಾಧಿಕಾರಿಗಳು ಬಂದಿದ್ದರು. ನಮ್ಮ ಸಂಸ್ಥೆಯ ಸುವರ್ಣ ಎಂಬುವವರು ನನಗೆ ಗೊತ್ತಿಲ್ಲ. ಸುವರ್ಣಾ ಎಂಬುವವರು ನನಗೆ ಗೊತ್ತಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಸುವರ್ಣಾರಿಗೂ ಹಣಕಾಸಿನ ವಿಚಾರದಲ್ಲಿ ವೈಷಮ್ಯವಿದ್ದು

ಅವರ ಮಾತಿನಂತೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ತನಿಖಾಧಿಕಾರಿಗಳು ಕರೆದುಕೊಂಡು ಹೋದಾಗ ಮಧ್ಯಾಹ್ನ **2-30** ಆಗಿತ್ತು. ಅವರು ಬೆಳಕವಾಡಿಯ ಕಡೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ನಂತರ ನಾನು ಮಳವಳ್ಳಿಗೆ ಹೋಗಿರುತ್ತೇನೆ. ಪೊಲೀಸರ ಮುಂದೆ ಹೇಳಿಕೆ ನೀಡಿ, ಸಹಿ ಮಾಡಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆ ನಡೆದ **2** ದಿನಗಳ ನಂತರ ನಾನು ಪೊಲೀಸರನ್ನು ಭೇಟಿಯಾಗಿರುತ್ತೇನೆ. ನಾನು ಸುವರ್ಣರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.